ಆದಲ್ಲಿ ವಂಡರ್ಫುಲ್ ಸಕ್ಸಸ್ ಕಾಣುವ ಎಲ್ಲಾ ಲಕ್ಷಣಗಳೂ ಒಡಗೂಡುತ್ತಿವೆಯೆನಿಸುತ್ತಿದೆ ನನಗೆ' ಎಂದೆ. 'ಕೆ.ಎಮ್. ನಯ್ಯಾರ್ ಟೀವಿ ಚಾನಲ್‌ಗಳಿಗೆ ಇಂಟರ್ವ್ಯೂ ಕೊಟ್ಟ ನಂತರ ಮೌನಕ್ಕೆ ಸೆರೆಯಾಗಿದ್ದಾರೆ. ಇನ್ನು ನಾಳೆ ಬೆಳಿಗ್ಗೆ ಆರು ಗಂಟೆಗೇನೇ ಮೌನ ಮುರಿಯೋದು. ಅವರ ಫೋನ್ ನನ್ನ ಕೈಗೆ ಕೊಟ್ಟಿದ್ದಾರೆ. ಜಸ್ಟ್ ಐದು ನಿಮಿಷಗಳ ಹಿಂದೆ ಸಿಂಧೂ ಫೋನ್ ಮಾಡಿದ್ದಳು. ನೀವು ಮಸ್ಸೂರಿಗೆ ಹೋಗುತ್ತಿರುವಿರಂತೆ?' ಎಂದ ಭಗವಾನ್ ಕುಟ್ಟಿಯ ಮಾತುಗಳಿಗೆ, 'ಹೌದು ದೆಹಲಿಯನ್ನು ಬಿಡುತ್ತಿದ್ದೇನೆ. ನನ್ನ ಅಣ್ಣ ಕೂಡಾ ಮಸ್ಸೂರಿಯಲ್ಲಿ ಇದ್ದಿದ್ದರಿಂದ ಅಲ್ಲಿಗೆ ಹೋಗಲು ನಿನ್ನೆಯೇ ತೀರ್ಮಾನಿಸಿದ್ದೆ. ಆದರೆ ಅಣ್ಣ ಇವೊತ್ತು ಬೆಳಿಗ್ಗೆ ನೈನಿತಾಲಿಗೆ ಹೊರಟಿದ್ದಾನಂತೆ. ದಿಲ್ಲಿಗೆ ಬರೋದು ಮೂರು ದಿನ ಆಗ್ತದಂತೆ. ರಾಘವರೆಡ್ಡಿ ಕೂಡಾ ಇವೊತ್ತು, ನಾಳೆ ಬಿಜಿಯಾಗಿರ್ತಾರೆ. ಹಾಗಾಗಿ ಮಸ್ಸೂರಿಗೆ ಹೊರಟೇಬಿಟ್ಟೆ, ಹೇಗೂ ಡಾಕ್ಟರ್ ಆಮ್ರಪಾಲಿಯವರ ಪರಿಚಯವೂ ಆಗುತ್ತದಲ್ಲ ಅಂತ. ಅಂದಹಾಗೆ ನಾನು ಮಸ್ಸೂರಿಗೆ ಹೋಗುತ್ತಿರುವ ವಿಷಯವನ್ನು ರಾಘವರೆಡ್ಡಿಯ ಹತ್ತಿರ ಹೇಳಬೇಡಿ. ಏಕೆಂದರೆ, ಅವರಿಗೆ ನಾನು ತಾಜ್‌ಮಹಲ್ ನೋಡಲು ಆಗ್ರಾಕ್ಕೆ ಹೋಗುತ್ತಿರುವುದಾಗಿ ಹೇಳಿದ್ದೇನೆ' ಎಂದಿದ್ದೆ.

'ಆಯ್ತು ಸಾಹೇಬ್ರೆ, ಇಷ್ಟಕ್ಕೂ ರಾಘವರೆಡ್ಡಿಯವರೊಂದಿಗೆ ಹಿಂದೆ ಯಾವೊತ್ತೂ ನಾನು ಫೋನಿನಲ್ಲಿ ಮಾತನಾಡಿದವನಲ್ಲ. ಅವರು ಯಾವಾಗಲೂ ಕೆ.ಎಮ್. ನಯ್ಯಾರೊಂದಿಗೆ ಡೈರೆಕ್ಟ್ ಕಾಂಟ್ಯಾಕ್ಟ್. ಒಂದು ವಿಷಯ, ಸಮಯವಿದ್ದರೆ ಮಾಲ್ ರೋಡಿನಲ್ಲಿ ರಸ್ಕಿನ್ ಬಾಂಡ್‌ರವರ ಪುಸ್ತಕದ ಅಂಗಡಿ ಇದೆ. ಹೋಗಿ ಮಾತನಾಡಿಸಿಕೊಂಡು ಬನ್ನಿ. ಹಾಗೇ ಮುಂದಕ್ಕೆ ಹೋದರೆ ಇಬ್ಬರು ಪಂಜಾಬಿ ಯುವಕರು ನಡೆಸುತ್ತಿರುವ ಅರ್ಬನ್ ಟರ್ಬನ್ ಅನ್ನೋ ಹೋಟೆಲ್ ಇದೆ. ಚಿಕನ್ ಮತ್ತು ಫಿಶ್ ಐಟಂಗಳು ಅದ್ಭುತ ರುಚಿಯಿರುತ್ತವೆ. ಒಂದು ಟೈಮ್ ಅಲ್ಲಿ ಊಟ ಮಾಡಿಕೊಂಡು ಬನ್ನಿ. ನಾನು ನಾಲ್ಕು ಸಾರಿ ಮಸ್ಸೂರಿಗೆ ಹೋಗಿದ್ದೇನೆ. ನಾಲ್ಕು ಸಾರಿಯೂ ಅಲ್ಲಿ ಊಟ ಮಾಡಿದ್ದೇನೆ. ಇರಲಿ, ನಾಳೆ ಕೆ.ಎಮ್. ನಯ್ಯಾರ್ ಮೌನದಿಂದ ಹೊರಬಂದ ನಂತರ ಫೋನ್ ಮಾಡಿಸುತ್ತೇನೆ' ಎಂದು ಫೋನ್ ಕಟ್ ಮಾಡಿದ್ದ ಭಗವಾನ್ ಕುಟ್ಟಿ. ನನ್ನಲ್ಲಿ ಮೊಬೈಲ್ ಫೋನಿನ ಆವಿಷ್ಕಾರದ ಬಗ್ಗೆ ಎಲ್ಲಿಲ್ಲದ ವಿಸ್ಮಯ ಉಂಟಾಗಿತ್ತು. ಜಗತ್ತನ್ನು ಮೊಬೈಲ್ ಫೋನುಗಳು ಬೆಸೆಯುವ ರೀತಿ ನಿಜಕ್ಕೂ ಅದ್ಭುತಗಳಲ್ಲಿ ಅದ್ಭುತ ಸಂಗತಿಯೇ ಸರಿ. ಗಾಳಿ ಮತ್ತು ಮನುಷ್ಯನ ಮೆದುಳಿನ ಸಂಯೋಜನೆ ಎಲ್ಲಾ ಊಹೆಗಳಿಗೂ ಮೀರಿದ್ದೆಂಬುದು ಎಂಥಾ ವ್ಯಾಖ್ಯಾನಕ್ಕೂ ಮೀರಿದ ಸಂಗತಿಯೆಂಬುದು ಖಂಡಿತವಾಗಿಯೂ ನಿರ್ವಿವಾದ ವಿಷಯವೇ ಸರಿ!

ಭಾಗ–19

ನಾನು ಮಸ್ಸೂರಿಯನ್ನು ತಲುಪಿದಾಗ ಸಂಜೆ ಆರು ಗಂಟೆಯಾಗಿತ್ತು. ಸಿಂಧೂ ಮೆನನ್ ತಾವಿರುವ ಗೆಸ್ಟ್ ಹೌಸಿನ ಲೊಕೇಶನ್ ಶೇರ್ ಮಾಡಿದ್ದಳು. ಲಾಲ್ ಬಹದ್ದೂರ್ ಶಾಸ್ತ್ರಿ ನ್ಯಾಶನಲ್ ಅಕಾಡೆಮಿ ಫಾರ್ ಅಡ್ಮಿನಿಸ್ಟ್ರೇಶನ್ ಕ್ಯಾಂಪಸ್‌ನಿಂದ ಅರ್ಧ ಕಿಲೋಮೀಟರ್ ಮುಂದಕ್ಕೆ ಅರ್ಧ ಎಕರೆ ಜಾಗದಲ್ಲಿ ಹರಡಿಕೊಂಡಿದ್ದ ಗೆಸ್ಟ್ ಹೌಸ್ ಸಿಕ್ಕಿತ್ತು. ಗೇಟ್‌ನಲ್ಲಿದ್ದ ನಾಲ್ಕು ಜನ ಅಸ್ಸಾಂ ಮೂಲದ ಸೆಕ್ಯೂರಿಟಿಯವರು ಫೋನ್ ಮಾಡಿ ನನ್ನ ವಿವರಗಳನ್ನು ತಿಳಿಸಿದ ಮೇಲೆ ಕಾರನ್ನು ಒಳಕ್ಕೆ ಬಿಡಲಾಯಿತು. ಅದೊಂದು ಬ್ರಿಟಿಷರ ಕಾಲದ ಕಟ್ಟಡವಾಗಿತ್ತು. ವಿಶಾಲವಾದ ಗೆಸ್ಟ್ ಹೌಸ್ ಸುತ್ತಲೂ ಐದಾರು ಸುಮಾರಾದ ಮನೆಗಳು. ಮಿಕ್ಕಂತೆ ಕಾಂಪೌಂಡ್ ತುಂಬಾ ವಿಧವಿಧವಾದ ಮರಗಳು ಮತ್ತು ಹೂವಿನ ಗಿಡಗಳು. ಆಗಷ್ಟೇ ಬಿರಿದ ಸಂಜೆ ಮಲ್ಲಿಗೆಯ ಹೂವಿನ ಘಮಘಮ ವಾಸನೆ ಸುಮಧುರವಾಗಿ ಹರಡಿಕೊಂಡಿತ್ತು. ಸಂಜೆಗತ್ತಲು ಮಂದವಾಗಿ ಆವರಿಸಿಕೊಂಡಿದ್ದರಿಂದಾಗಿ ಮನೆಯ ಸುತ್ತಲೂ ವಿದ್ಯುತ್ ದೀಪಗಳು ಬೆಳಗುತ್ತಿದ್ದವು. ಕಾರಿನಿಂದ ಇಳಿದ ಕೂಡಲೇ ಚಳಿ ಶರೀರವನ್ನು ಗಪ್ಪನೆ ಅವುಚಿಕೊಂಡಿತ್ತು. ಗೆಸ್ಟ್ ಹೌಸಿನ ಮುಂಬಾಗಿಲಿನಲ್ಲೇ ಸಿಂಧೂ ಮೆನನ್ ನಿಂತಿದ್ದಳು. ಬಿಳಿಯ ಚೂಡಿದಾರ್, ಅದೇ ಬಣ್ಣದ ಸ್ವೆಟರ್ ಹಾಗೂ ಸ್ಕಾರ್ಫ್ ತೊಟ್ಟಿದ್ದವಳು ಶ್ವೇತ ವರ್ಣದ ಪುತ್ಥಳಿಯಂತೆ ಕಂಗೊಳಿಸುತ್ತಿದ್ದಳು. ನನ್ನನ್ನು ನೋಡಿದ ಕೂಡಲೇ 'ಇವೊತ್ತು ಉಷ್ಣಾಂಶ ಆರು ಡಿಗ್ರಿ ಸೆಲ್ಸಿಯಸ್‌ಗೆ ಡ್ರಾಪ್ ಆಗಿದೆ. ಆದರೆ ಎಲ್ಲಾ ಕೊಠಡಿಗಳಲ್ಲೂ ಹೀಟರ್ ಮತ್ತು ಅಗ್ಗಿಷ್ಟಿಕೆಗಳ ವ್ಯವಸ್ಥೆ ಇದೆ, ಹಾಗಾಗಿ ಹೆದರುವಂತಹ ಪ್ರಮೇಯವೇನೂ ಇಲ್ಲ' ಎಂದು ಹೇಳಿ ಹತ್ತಿರದಲ್ಲೇ ಇದ್ದ ನಾನು ಉಳಿದುಕೊಳ್ಳುವ ಕೊಠಡಿಯನ್ನು ತೋರಿಸಿ, 'ನಾವು ಅದೋ ಒಂದನೇ ಕೊಠಡಿಯಲ್ಲಿ ಇದ್ದೇವೆ. ನೀವು ಫ್ರೆಶ್ ಆಗಿ ಅಲ್ಲಿಗೆ ಬರಬಹುದು ಮತ್ತು ಊಟಕ್ಕೆ ಕೂಡ ಅಲ್ಲೇ ಅರೆಂಜ್ ಮಾಡಲಾಗಿದೆ' ಎಂದು ಆ ಕಡೆ ನಡೆದಿದ್ದಳು.

ರೂಮು ಯಾವ ಫೈವ್ ಸ್ಟಾರ್ ಹೋಟೆಲ್ ರೂಮುಗಳಿಗಿಂತಲೂ ಕಡಿಮೆಯಿರಲಿಲ್ಲ. ರೂಮಿನ ಮೂಲೆಯಲ್ಲಿ ಸಣ್ಣದಾಗಿ ಅಗ್ಗಿಷ್ಟಿಕೆ ಉರಿಯುತ್ತಿತ್ತು. ಆ ಕಡೆಯಿಂದ ಊದುಬತ್ತಿಯಿಂದ ಬರುವಂತೆ ಎಂಥದೋ ಘಮ್ಮನೆಯ ಮರಿಮಳ ಸಣ್ಣದಾಗಿ ಹರಿದು ಬರುತ್ತಿತ್ತು. ಬೆಚ್ಚನೆಯ ಪರಿಸರ ಆಹ್ಲಾದಕರ ವಾತಾವರಣವನ್ನು ಸೃಷ್ಟಿಸಿತ್ತು. ಮಂಚ, ಸೋಫಾ, ಟೀಪಾಯ್, ಟೇಬಲ್, ವುಡನ್ ಚೇರ್ ಎಲ್ಲವೂ ಆಂಟಿಕ್ ಆಗಿದ್ದವು. ಬಿಸಿಬಿಸಿ ನೀರಿನಲ್ಲಿ ಸ್ನಾನ ಮಾಡಿ ಹಾಸಿಗೆಯ ಮೇಲುರುಳಿದಾಗ ಪ್ರಯಾಣದ ಆಯಾಸ ದೇಹದಿಂದ ಹೊರಹೋಗುತ್ತಿರುವುದು ಹಿತಕರವಾದ ನೋವಿನಂತೆ ಅನುಭವಕ್ಕೆ ಬರುತ್ತಿತ್ತು. ಅಷ್ಟೊತ್ತಿಗೆ ಫೋನ್ ಮೊಳಗಿತ್ತು. ಸ್ಕ್ರೀನ್ ಮೇಲೆ **private number** ಎಂದು ಡಿಸ್‌ಪ್ಲೇ ಆಗುತ್ತಿತ್ತು. ಬಹುಶಃ ಅಣ್ಣ ವಿಕ್ರಮ್ ರೆಡ್ಡಿ ಫೋನ್ ಮಾಡುತ್ತಿರಬೇಕೆಂದು ರಿಸೀವ್ ಮಾಡಿಕೊಂಡು 'ನೈನಿತಾಲಿನಲ್ಲಿದ್ದೀಯಾ ಅಣ್ಣ' ಎಂದು ಕೇಳಿದ್ದೆ. 'ಅಯ್ಯೋ ಗುಲ್ಡುಖಾನ್, ನಾನು ಕಣೋ ನಿನ್ನ ಎಕ್ಸ್ ಲೈಫ್ ಪಾರ್ಟನರ್ ಆಶಾ ಬೆಂಗತಮಲೆ. ಎಂಥಾ ಕ್ರೂರಿ ನೀನು, ಲೈಫ್‌ನಿಂದ ಒಬ್ಬರಿಗೊಬ್ಬರು ಡಿಪಾರ್ಚರ್ ಆಗುತ್ತಿರುವ ಸಮಯದಲ್ಲಾದರೂ ಒಂದು ವಿಶ್ ಮಾಡಲಿಲ್ಲ ನೀನು. ಶತ್ರುಗಳಲ್ಲೂ ನಿನ್ನಲ್ಲಿರುವಷ್ಟು ಸಣ್ಣತನ, ಕ್ರೌರ್ಯ ಇರುವುದಿಲ್ಲವೆಂದು ನನಗೀಗ ಸಾಬೀತಾಗಿಹೋಯಿತು. ನೀನು ಹೇಗಾದರೂ, ಎಲ್ಲಾದರೂ ಸಾಯಿ. ನಾನಂತೂ ಇನ್ನು ಯಾವೊತ್ತೂ ನಿನ್ನ ಧ್ವನಿಯನ್ನು ಕೇಳಲೂ ಇಷ್ಟಪಡಲಾರೆ. ಗುಡ್ ಬೈ ಫಾರ್ ಎವರ್ ಯು ಹಾರ್ಟ್‌ಲೆಸ್ ಪಿಗ್' ಎಂದು ಫೋನ್ ಕಟ್ ಮಾಡಿದ್ದಳು. ನಾನು ಕ್ಷಣ ದಿಕ್ಕು ತಪ್ಪಿದವನಂತಾಗಿಬಿಟ್ಟಿದ್ದೆ. ಇಷ್ಟಕ್ಕೂ ನನ್ನ ತಪ್ಪು ಏನಿರಬಹುದೆಂದು ಯೋಚನೆಗೆ ಬಿದ್ದಿದ್ದೆ.

ಬಾಗಿಲ ಬೆಲ್ ಸದ್ದಾಗಿ ಎದ್ದು ಬಾಗಿಲು ತೆಗೆದಿದ್ದೆ. ಅಗಲವಾದ ಅಂದದ ಪಿಂಗಾಣಿ ತಟ್ಟೆಯೊಂದರಲ್ಲಿ ಚಹಾದ ಬೌಲ್ ಇಟ್ಟುಕೊಂಡು ನರ್ಸ್ ಉಡುಗೆಯಲ್ಲಿ ಸುಂದರ ಯುವತಿಯೊಬ್ಬಳು ನಿಂತಿದ್ದಳು. ಅವಳ ಮುಖಚರ್ಯೆ ಮತ್ತು ಕೂದಲಿನಿಂದ ಖಂಡಿತವಾಗಿಯೂ ಅವಳು ಕೇರಳದ ಮೂಲದವಳೆಂದು ಹೇಳಬಹುದಾಗಿತ್ತು. 'ಗರಂ ಮಸಾಲಾ ಚಾಯ್, ಸ್ವತಃ ಆಮ್ರಪಾಲಿ ಮೇಡಮ್ ಮಾಡಿದ್ದು. ಅಂದಹಾಗೆ ನೀವು ಮಲೆಯಾಳಿಗಳ? ಸಿಂಧೂ ಮೇಡಮ್ ಜೊತೆ ನೀವು ಮಲೆಯಾಳಂನಲ್ಲಿ ಮಾತನಾಡುತ್ತಿದ್ದದ್ದನ್ನು ಕೇಳಿಸಿಕೊಂಡೆ' ಎಂದು ಚಹಾದ ಬೌಲನ್ನು ಟೇಬಲ್ ಮೇಲಿಡುತ್ತಾ ಕೇಳಿದ್ದಳು. 'ನಾನು ಬೆಂಗಳೂರಿನವನು, ಆದರೂ ಮಲೆಯಾಳಂ ನನಗೆ ತುಂಬಾ ಚೆನ್ನಾಗಿ ಮಾತನಾಡಲು ಬರುತ್ತದೆ' ಎಂದ ನನ್ನ ಮಾತು ಕೇಳಿ, 'ಓಹ್ ಎಷ್ಟು ಚೆನ್ನಾಗಿ ಮಲೆಯಾಳಂ ಮಾತನಾಡ್ತೀರಿ. ನನ್ನದು ಎರ್ನಾಕುಲಂ. ಅಲ್ಲೇ ನರ್ಸಾಗಿದ್ದೆ. ಸಿಂಧೂ ಮ್ಯಾಮ್ ನನ್ನನ್ನು ಡಾಕ್ಟರ್ ಆಮ್ರಪಾಲಿ ಮೇಡಮ್ ಜೊತೆ ಹತ್ತು ವರ್ಷಗಳ ಹಿಂದೆಯೇ ಕರೆತಂದು ಸೇರಿಸಿದರು. ಅವರ ಪರ್ಸನಲ್ ನರ್ಸ್. ಸದಾ ಅವರೊಂದಿಗೆ. ಅವರು ಎಲ್ಲಿ ಹೋದರೆ, ಅವರು ಎಲ್ಲಿದ್ದರೆ ನಾನು ಅಲ್ಲಿ. ಫ್ಲಾರೆನ್ಸ್ ನೈಟಿಂಗಲ್ ನನ್ನ ರೋಲ್ ಮಾಡೆಲ್. ಅವಳಲ್ಲಿ ಕನಿಷ್ಠ ಐದಾರು ಪರ್ಸೆಂಟ್ ಆದರೂ ಸೇವೆ ಮಾಡುವ ಸಂಕಲ್ಪ' – ಅವಳು ಚಹಾವನ್ನು ಗ್ಲಾಸಿಗೆ ಬಗ್ಗಿಸಿಕೊಡುತ್ತಾ ಹೇಳಿದ್ದಳು.

'ಗುಡ್, ಖುಷಿಯಾಯ್ತು ನಿಮ್ಮ ಮಾತು ಕೇಳಿ. ಡಾಕ್ಟರ್, ನರ್ಸ್ ವೃತ್ತಿಯಲ್ಲಿ ಸೇವಾ ಮನೋಭಾವ ಸ್ವಲ್ಪವಾದರೂ ಇರಬೇಕು' ಎಂದು ಅವಳನ್ನು ಪ್ರಶಂಸಿಸಿದ್ದೆ. 'ಡಾಕ್ಟರ್ ಅರುಂಧತಿ ಪಿಳ್ಳೈರೊಂದಿಗೆ ಒಂದೆರಡು ತಿಂಗಳು ಸ್ಕೂಲ್ ಆಫ್ ಚಾಲೆಂಜ್‌ನಲ್ಲೂ ಕೆಲಸ ಮಾಡಿದೆ. ಅದೊಂದು ಮರೆಯಲಾರದ ಅನುಭವ. ಮೊನ್ನೆ ಪ್ರವಾಹದಲ್ಲಿ ಅರುಂಧತಿ ಮ್ಯಾಮ್ ಇಲ್ಲವಾಗಿದ್ದು ನಮಗೆಲ್ಲಾ ದೊಡ್ಡ ನಷ್ಟ. ಏನು ಮಾಡೋದು, ವಿಧಿ ಮುಂದೆ ಯಾರೂ ಯಾವುದೂ ದೊಡ್ಡದಲ್ಲವಲ್ಲ. ಇರಲಿ, ಚಹಾ ಕುಡಿದು ನೀವು ರೂಂ ನಂಬರ್ ಒನ್‌ಗೆ ಹೋಗಬಹುದು' ಅವಳ ಮಾತುಗಳಲ್ಲಿ ಸ್ಪಷ್ಟತೆ ಗೋಚರವಾಗುತ್ತಿತ್ತು. 'ನಿಮ್ಮ ಹೆಸರೇನು?' ಕೇಳಿದ್ದೆ ಕುತೂಹಲದಿಂದ. 'ಕರುತ್ತಮ್ಮ ಅಂತ.